


### ಉಪಯುಕ್ತ ಮಾಹಿತಿ

'ಸುಖದೂಟ ಸಮತೂಕ' ಡಾ.ಎಚ್.ಎಸ್.ಪ್ರೇಮ ಅವರ ಮುಖಪುಟ ಲೇಖನ ಆಹಾರದಲ್ಲಿ ಹಿತಮಿತವಾಗಿರುವ ಬಗ್ಗೆ ಒಳ್ಳೆಯ ಮಾಹಿತಿ ನೀಡಿದೆ.

ಕೊ.ಸುಂ. ನರಸಿಂಹಮೂರ್ತಿ, ಮೈಸೂರು/ ಟಿ.ಎನ್. ಸರಸ್ವತಿ, ತಿಪಟೂರು/ ಪಿ.ಗೋವಿಂದರಾಜ್, ಶಿವಮೊಗ್ಗ

### ವೈದ್ಯರ ಸಲಹೆ ಯಶಸ್ವಿಯಾಗದು

ವೈದ್ಯರು ಸ್ಥೂಲಕಾಯರಿಗೆ ತೂಕ ಕಡಿಮೆ ಮಾಡಿಕೊಳ್ಳಲು ಸಲಹೆ ನೀಡುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಇದು ಯಶಸ್ವಿಯಾಗದು. ಏಕೆಂದರೆ:

ನಿಲುಗಡೆ!/ ವೈದ್ಯರ ಸಲಹೆಯಂತೆ
ತೂಕ ಇಳಿಸಿಕೊಳ್ಳಲು/ ವಾಕಿಂಗ್ ಹೊರಟ ಮಹಿಳೆ
ಪಾನಿಪೂರಿ ಅಂಗಡಿಯ ಮುಂದೆ/ನಿಂತೇ ಬಿಟ್ಟಳು!

–ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಕೆನಡಾ ಕಂಪು

ಕೆ.ರಾಮ ಅವಭೃತ ಅವರ 'ಭಾರತದಷ್ಟು ದೇಶದಲ್ಲಿ ಕರ್ನಾಟಕದಷ್ಟು ಜನ' ಕೆನಡಾದ ಶಿಸ್ತಿನ ಜೀವನವನ್ನು ಅನಾವರಣ ಮಾಡಿದೆ.

–ಎಚ್. ಆನಂದ್ ಕುಮಾರ್, ಚಿತ್ರದುರ್ಗ/ ಡಾ.ಪ್ರತಿಭಾ ಕಾರಂತ, ಕೋಟೇಶ್ವರ

### ವಿಭಿನ್ನ ವಸ್ತು, ನೈಜಕಥೆ

ಅನು ಬೆಳ್ಳೆಯವರ 'ದಾರಿಯಿಲ್ಲದ ದಾರಿ' ಕಥೆ ವಿಭಿನ್ನ ವಸ್ತು, ಪಾತ್ರಗಳಿಂದ ನೈಜವಾಗಿದೆ. ಪಾತ್ರಗಳ ಭಾವನೆಗಳನ್ನು ಮನ ಕಲಕುವಂತೆ ಕಟ್ಟಿಕೊಟ್ಟಿದ್ದಾರೆ.

–ಪಾರ್ವತಿ ಪಿಟಗಿ, ಬೆಳಗಾವಿ/ ಕೆ.ಎ.ಸೌಮ್ಯ, ಮೈಸೂರು

### ಆಷಾಢ ಸಂಪ್ರದಾಯ ತಪ್ಪಲ್ಲ

ತನುಮನದಲ್ಲಿ ವೈ–ಚಾರಿ ಬರೆದಿರುವಂತೆ ನಗರವಾಸಿ ನವದಂಪತಿಗಳು ಆಷಾಢದ ಸಂಪ್ರದಾಯ ಪಾಲಿಸಬೇಕಿಲ್ಲ ಎನ್ನುವುದು ತಪ್ಪು. ತಮ್ಮ ಆಸೆಗಳನ್ನು ನಿಯಂತ್ರಿಸಿ ಕೊಳ್ಳುವುದನ್ನು ಅಭ್ಯಾಸ ಮಾಡಿಸಲು ಆಷಾಢದ ಸಂಪ್ರದಾಯ ಸಹಕಾರಿ.

–ಕೆ. ಪ್ರಕಾಶ್, ಚಿಕ್ಕಜೋಗಿಹಳ್ಳಿ/ಮೊಳಕಾಲ್ಮುರು ಸುರೇಶ, ಬಳ್ಳಾರಿ

### ಕರ್ಣನಲ್ಲ, ವಿಕರ್ಣ

'ನೀವು ಕೇಳಿದಿರಿ'ಯಲ್ಲಿ ಕೆ.ಎನ್. ನಾರಾಯಣ ರೆಡ್ಡಿ ಕೇಳಿರುವ ಪ್ರಶ್ನೆಗೆ, ದುರ್ಯೋಧನನ ದುರಾಚಾರವನ್ನು ವಿರೋಧಿಸಿದವನು 'ಕರ್ಣ' ಎಂದು ತಪ್ಪಾಗಿ ರಾಮ್ ಉತ್ತರಿಸಿದ್ದಾರೆ. ಮಹಾ ಭಾರತದ ಸಭಾಪರ್ವದ 'ದ್ರೌಪದಿ ವಸ್ತ್ರಾಪಹರಣ' ಪ್ರಸಂಗದಲ್ಲಿ ದುರ್ಯೋಧನನ ತಮ್ಮನಾದ 'ವಿಕರ್ಣ' ಎಂಬುವನು ಮಾತ್ರ ದುರಾಚಾರವನ್ನು ವಿರೋಧಿಸುತ್ತಾನೆ.

–ಎಂ. ಮಲ್ಲಯ್ಯ, ಶ್ರೀರಾಂಪುರ/ ಸುಮತಿ ಕೃಷ್ಣರಾವ್, ತುಮಕೂರು

### ರಮ್ಯಾಳ ಅಶ್ಲೀಲ ಚಿತ್ರ

ಪುಟ 73ರಲ್ಲಿ 'ಜಾನಿ ಮೇರಾ ನಾಮ್' ಸಿನಿಮಾದ ರಮ್ಯಾ ಚಿತ್ರ ಅಶ್ಲೀಲವಾಗಿದೆ.

ಪಿ.ಎನ್.ಶ್ರೀವತ್ಸ, ಬೆಂಗಳೂರು

### ಸಿಡಿಲಿನ ವಾಸ್ತವತೆ

ಎಳೆಯರ ಅಂಗಳದ 'ಸಿಡಿಲು ಹೇಗೆ ಬರುತ್ತದೆ?' ಲೇಖನದ ಎರಡನೆಯ ಪ್ಯಾರಾದ ವಿವರಗಳು ಅವೈಜ್ಞಾನಿಕವಾಗಿವೆ: ಮೋಡಗಳು ವಾಯುಮಂಡಲದಲ್ಲಿಯೇ ಚಲಿಸುತ್ತವೆಯೇ ಹೊರತು ನಿರ್ವಾತದಲ್ಲಲ್ಲ. ಮೋಡಗಳ ಘರ್ಷಣೆಯ ಶಬ್ದದಿಂದ ಸಿಡಿಲು ಉಂಟಾಗುವುದಿಲ್ಲ.

ವಾಸ್ತವದ ಸಂಗತಿಯೆಂದರೆ, ಮೋಡಗಳ ನೀರಾವಿಯ ಘರ್ಷಣೆಯು ಸ್ಥಾಯಿ ವಿದ್ಯುತ್ತಿನ ಹುಟ್ಟಿಗೆ ಕಾರಣವಾಗಿ, ವಿದ್ಯುತ್ ಅಂಶವು ಮೋಡಗಳಲ್ಲಿ ಸಂಗ್ರಹವಾಗುತ್ತದೆ. ಪರಸ್ಪರ ವಿರುದ್ಧ (ಧನ–ಋಣ) ಅಂಶಗಳ ಸಂಗ್ರಹ ಒಂದು ಮಿತಿಯನ್ನು ದಾಟಿದಾಗ ಸ್ಥಾಯಿವಿದ್ಯುದಂಶ ತಮ್ಮ ನಡುವಿನ ಅಸಮತೋಲನ ಹೋಗಲಾಡಿಸುವ ಹಿನ್ನೆಲೆಯಲ್ಲಿ ಒಂದು ಮೋಡದಿಂದ ಮತ್ತೊಂದು ಮೋಡದತ್ತ ಚಲಿಸುತ್ತದೆ. ಇದು ಬೆಳಕಿನ ರೂಪದಲ್ಲಿ ಕಾಣಬರುತ್ತಿದ್ದು ಇದನ್ನೇ 'ಮಿಂಚು' ಎಂದು ಕರೆಯುವುದು. ಈ ಮಿಂಚು ಅತ್ಯಂತ ಬಿಸಿಯಾಗಿದ್ದು, ತನ್ನ ಸುತ್ತಲಿನ ಹವೆಯನ್ನು ತೀವ್ರವಾಗಿ ಹಿಗ್ಗುವಂತೆ ಮಾಡುತ್ತದೆ (ಇದು ನಿರ್ವಾತದಲ್ಲಿ ಸಾಧ್ಯವಿಲ್ಲ). ಈ ಹಿಗ್ಗುವಿಕೆಯು ಶಬ್ದಕ್ಕೆ ಕಾರಣವಾಗುತ್ತದೆ. ಇದೇ 'ಗುಡುಗು'. ಮೋಡಗಳ ಪ್ರಪಂಚದಿಂದ ಚಲಿಸಿದ ಮಿಂಚು ಭೂಮಿಯತ್ತ ಚಲಿಸಿ ಅನ್ಯ ವಸ್ತುಗಳಿಗೆ ಅಪ್ಪಳಿಸಿದ್ದೇ ಆದರೆ, ಅದು 'ಸಿಡಿಲು' ಎನಿಸಿಕೊಳ್ಳುತ್ತದೆ.

–ಚಂದ್ರಶೇಖರ ಇ. ಕಟ್ಟಿಮನಿ, ಬೀಳಗಿ

ವಿಶ್ವದ ಪ್ರಪ್ರಥಮವಾದ ಅಗೋಚರ ಶ್ರವಣ ಸಾಧನ



- ವಿಶ್ವದ ಅತ್ಯಂತ ಶಕ್ತಿಶಾಲಿ ಸಂಪ್ರದಾಯ ಶ್ರವಣ ಸಾಧನಗಳು
- ವಿಶ್ವದ ಏಕಮಾತ್ರ ಅಗೋಚರ ಶ್ರವಣ ಸಾಧನ
- ಶ್ರವಣ ಸಾಧನಗಳಿಗೆ ವಿಶೇಷ ರಿಯಾಯಿತಿ ಪಡೆಯಿರಿ
- ಎಲ್ಲಾ ಶ್ರವಣ ಸಾಧನಗಳ ವಿಶೇಷ ವಿನಿಮಯ ಕೊಡುಗೆಯಿರುವುದು

ಉಚಿತ ಮೌಲ್ಯಮಾಪನ ಸಪ್ತಾಹ

SOUNDFUL 15 YEARS
SINCE 1994
RAJAN SPEECH & HEARING
Listen to life

"ಈಗಲೇ ಸಮಯ ನಿಗದಿ ಮಾಡಿಕೊಳ್ಳಿ"

ಇದೀಗ ಮಲ್ಲೇಶ್ವರಂನಲ್ಲಿ

Ph: 22290737, 65467791, 22279807, 41510404
email: rshc@satyam.net.in www.rshc.in

ಬೆಂಗಳೂರಿನಲ್ಲಿರುವ ಕ್ಲಿನಿಕ್‌ಗಳು: ರೆಸಿಡೆನ್ಸಿ ರಸ್ತೆ । ಕೋರಮಂಗಲ । ಇಂದಿರಾನಗರ । ಮಲ್ಲೇಶ್ವರಂ